**ಬಸ್ಸಿನಲ್ಲಿ ಪಕ್ಕ ಕುಳಿತಿದ್ದ ಆಕೆಯ ಕಣ್ಣಲ್ಲಿ ಬಯಕೆಯ ನೋಟವೊಂದು ಹಿತವಾಗಿ ತುಳುಕಿತ್ತು. ಅಲ್ಲಿ ಸ್ಪರ್ಶದ ನಿರೀಕ್ಷೆಯಿತ್ತು. ಮಳೆಯೇ ಬಾರದೆಯೂ ಕಿಟಕಿಯಿಂದ ಹನಿ ಬೀಳುತ್ತಿದೆ ಎಂಬ ನೆಪ ಹೂಡಿ ಮತ್ತೆಮತ್ತೆ ನನ್ನೆಡೆಗೆ ಸರಿದು ಬರುತ್ತಿದ್ದವಳಲ್ಲಿ ಅಪ್ಪುಗೆಯ ಬೇಡಿಕೆಯಿತ್ತು. ಆದರೆ, ನನ್ನ ಖಾತೆಯಲ್ಲಿ ಅದ್ಯಾವುದೂ ಇರಲೇ ಇಲ್ಲ!**

ಆಘಾತದ ಮಳೆ ಸುರಿಯುತ್ತಿರುವ ಕಂಗಳಿಂದ ಅವಳನ್ನೇ ನೋಡತೊಡಗಿದೆ.

"ಸಾರಿ ಸಾತ್ವಿಕ್. ಇಲ್ಲಿ ಮಿಸ್ ಅಂಡರ್‌ಸ್ಟ್ಯಾಂಡಿಂಗ್ ಆಗಿದೆ. ನಾನು ನನ್ನ ಅಂತಿಮ ನಿರ್ಧಾರವನ್ನು ಇನ್ನೂ ಹೇಳಿಲ್ಲ. ಬೈದಬೈ, ನಂಗೆ ತಡವಾಗ್ತಿದೆ. ಆಫೀಸಲ್ಲಿ ಕೇವಲ ಒಂದು ಗಂಟೆಯ ಅವಕಾಶ ಪಡೆದು ಬಂದಿದ್ದು ನಾನು. ಹೋಗಿ ತಲುಪುವಷ್ಟರಲ್ಲಿ ಸರಿಯಾಗತ್ತೆ."

ಕಣ್ಣ ಮುಂದಿನ ಚಿತ್ರಗಳೆಲ್ಲಾ ಮಸುಕಾಗತೊಡಗಿದವು. ಇಷ್ಟು ಹೊತ್ತು ಎದೆಯೊಳಗೆ ತುಂಬಿದ್ದ ಅವ್ಯಕ್ತ ಖುಷಿ ಬಿಸಿಲಿಗೆ ಸಿಕ್ಕ ಇಬ್ಬನಿಯಂತೆ ಮಾಯವಾಗತೊಡಗಿತು. ಎದ್ದು ನಡೆದುಹೋದವಳನ್ನೇ ನೋಡುತ್ತಾ ಕುಳಿತೆ.

ಬದುಕಿನಲ್ಲಿ ಪ್ರೀತಿ ಹೀಗೆ ಬೆನ್ನು ಹಾಕಿ ಎದ್ದುಹೋಗುತ್ತಿರುವುದು ಇದು ಎಷ್ಟನೆಯ ಸಲ?

★★★

"ನೀನು ಹಾಗೆಲ್ಲಾ ಎಲ್ಲವನ್ನೂ ಹೇಳಬಾರದಿತ್ತು ಕಣೋ. ಇನ್ನೂ ಸ್ವಲ್ಪ ಆತ್ಮವಿಶ್ವಾಸದಿಂದ ನಡೆದುಕೊಳ್ಳಬೇಕಿತ್ತು. ಅದಕ್ಕೇ ಅವಳು ನಿರ್ಧಾರ ಬದಲಾಯಿಸಿದಳೋ ಏನೋ?"

ಅರೆಕ್ಷಣ ಯೋಚಿಸಿ ಮಾತು ಮುಂದುವರೆಸಿದ ಗೆಳೆಯ ಗಣೇಶ.

"ನೋಡು, ಭವಿಷ್ಯದಲ್ಲಿ ನಾವು ಏನು ಮಾಡಬೇಕೆಂದಿದ್ದೇವೆ, ನಮ್ಮ ಯೋಚನೆಗಳು ಏನಿವೆ ಎಂಬುದರ ಆಧಾರದ ಮೇಲೆ ನಮ್ಮನ್ನು ನಾವು 'ಇಂಥವರು' ಎಂದು ನಿರ್ಧರಿಸುತ್ತೇವೆ. ಆದರೆ, ಸಮಾಜ ಹಾಗಲ್ಲ. ಅದು ಇದುವರೆಗೆ ನಾವು ಏನು ಮಾಡಿದ್ದೇವೆ ಎಂಬುದನ್ನು ನೋಡಿ ನಮ್ಮನ್ನು ಇಂಥವರು ಎಂದು ನಿರ್ಧರಿಸುತ್ತದೆ. ದೊಡ್ಡ ಸಾಧನೆಯೊಂದನ್ನು ಮಾಡಿದ ವ್ಯಕ್ತಿಯೊಬ್ಬ ಸರಳತನದ ಮಾತುಗಳನ್ನಾಡಿದರೆ, ತನ್ನ ನ್ಯೂನತೆಗಳ ಬಗ್ಗೆ ಹೇಳಿಕೊಂಡರೆ ಅದು ತೂಕದ ಮಾತು ಎಂದಾಗುತ್ತದೆ. ಆದರೆ, ನನ್ನ ನಿನ್ನಂತಹ ಸಾಮಾನ್ಯರು ಆ ಮಾತುಗಳನ್ನಾಡಿದರೆ ಜಗತ್ತಿನ ಕಿವಿಗದು ದುರ್ಬಲ ಬಡಬಡಿಕೆಯಂತೆ, ಒಣ ವೇದಾಂತದಂತೆ ಕೇಳುತ್ತದೆ. ಬಹುಶಃ ನಿನ್ನ ಕುರಿತಾಗಿ ನೀನಾಡಿದ ಮಾತುಗಳೂ ವೈಶಾಲಿಗೆ ಹಾಗೇ ಅನಿಸಿದವೋ ಏನೋ?"

ಗಣೇಶನ ಮಾತುಗಳು ನಿಜ ಎನಿಸಿದವು. ನಿಮಗೆ ಸಂಬಂಧಗಳನ್ನು ಉಳಿಸಿಕೊಳ್ಳುವುದಕ್ಕೆ ಬರುವುದಿಲ್ಲ ಎಂದು ಸುಮಾ ಹೇಳಿದ್ದು ನೆನಪಾಯಿತು. ನಾನೇಕೆ ಹೀಗೆ? ಆ ರೆಸ್ಟೋರೆಂಟಿನಲ್ಲಿ ಅದೆಷ್ಟು ಜೋಡಿಗಳು ಕುಳಿತಿದ್ದವು. ಅವರು ತಮ್ಮ ಪ್ರೀತಿಯನ್ನು ಹೇಗೆ ಸಂಪಾದಿಸಿದರು? ಹಣದಿಂದಲೇ? ಮಾತಿನಿಂದಲೇ? ಆತ್ಮವಿಶ್ವಾಸದಿಂದಲೇ? ಅವರೆಲ್ಲಾ ಸುಲಭವಾಗಿ ಗೆಲ್ಲುವ ಅದೇ ಪ್ರೀತಿಯಲ್ಲಿ ನಾನೇಕೆ ಮತ್ತೆಮತ್ತೆ ಸೋಲುತ್ತಿದ್ದೇನೆ?

ಸುಮಾಳ ವಿಷಯದಲ್ಲಾದರೂ ನಾನು ಸೋತಿದ್ದೆಲ್ಲಿ? ಯೋಚಿಸತೊಡಗಿದೆ. ನನಗೆ ಸರಿಯಾಗಿ ನೆನಪಿತ್ತು: ಅದ್ಯಾವುದೋ ಊರಿನ ಮೂಲೆಯಿಂದ ಮುದ್ದು ಗೊಂಬೆಯಂತೆ ತಯಾರಾಗಿ ಬಂದು ಬಸ್ಸಿನಲ್ಲಿ ಪಕ್ಕ ಕುಳಿತಿದ್ದ ಆಕೆಯ ಕಣ್ಣಲ್ಲಿ ಬಯಕೆಯ ನೋಟವೊಂದು ಹಿತವಾಗಿ ತುಳುಕಿತ್ತು. ಅಲ್ಲಿ